ಓಎಸ್ ನಂಬರ್:45/2016 ಡಿ ಡಬ್ಲ್ಯೂ: 2

**ದಿ:15.11.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ವಕೀಲರಿಂದಃ**

1. ವಿ. ಆರ್ ಅಣ್ಣಯ್ಯ ನನ್ನ ತಾತ. ನನ್ನ ತಾತನಿಗೆ ಇಬ್ಬರು ಹೆಂಡತಿಯರು. ವಸಂತಮ್ಮ ಎಂಬುವವರು ಮೊದಲನೇ ಹೆಂಡತಿ, ಮಾಯಮ್ಮ ಎಂಬುವವರು 2 ನೇ ಹೆಂಡತಿಯಾಗಿರುತ್ತಾರೆ.ಪ್ರತಿವಾದಿ 1, 2, 4 ಮತ್ತು 5 ರವರು ಮಾಯಮ್ಮ ಮತ್ತು

ಅಣ್ಣಯ್ಯರವರ ಮಕ್ಕಳು ಆಗಿರುತ್ತಾರೆ. ಪ್ರತಿವಾದಿ 6 ಮತ್ತು 7 ರವರು ಭಾರತಿ ಎಂಬುವವರ ಮಕ್ಕಳು ಆಗಿರುತ್ತಾರೆ. ಭಾರತಿ ಎಂಬುವಾರು ಕೂಡ ಮಾಯಮ್ಮ ಮತ್ತು ಅಣ್ಣಯ್ಯರವರ ಮಗಳು ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು 3 ನೇ ಪ್ರತಿವಾದಿ ವಾಸುದೇವ ಎಂಬುವವರ ಮಕ್ಕಳು ಆಗಿರುತ್ತಾರೆ.

2. ವಿ ಆರ್ ಅಣ್ಣಯ್ಯರವರ ಮೊದಲನೇ ಹೆಂಡತಿಯಾದ ವಸಂತಮ್ಮರವರ ಮಗನ ಹೆಸರು ಅರೇಂದ್ರ ಆಗಿರುತ್ತದೆ. ಸದರಿಯವರು ನನ್ನ ತಂದೆ. ನನ್ನ ತಂದೆಗೆ ನಾನು ಒಬ್ಬಳೇ ಮಗಳು. ನಮ್ಮ ಕುಟುಂಬಕ್ಕೆ ಸಂಬಂಧಿಸಿದ ಪಿತ್ರಾರ್ಜಿತ ಆಸ್ತಿ ಪೊದ್ದೂರು ಗ್ರಾಮದಲ್ಲಿ ಇದೆ. ಸದರಿ ಪಿತ್ರಾರ್ಜಿತ ಆಸ್ತಿಗಳು ಸರ್ವೆ ನಂ: 36/20, 36/30 ಮತ್ತು 36/47 ಆಗಿರುತ್ತದೆ. ಸದರಿ ಪಿತ್ರಾರ್ಜಿತ ಆಸ್ತಿ ಈವರೆಗೂ ವಿಭಾಗ ಆಗಿರುವುದಿಲ್ಲ ಜಂಟಿಯಾಗೇ ಇರುತ್ತದೆ. ಸದರಿ ಪಿತ್ರಾ ರ್ಜಿತ ಆಸ್ತಿಯಲ್ಲಿ ವಾದಿಯವರಿಗೆ ಒಂದು ಹಿಸ್ಸೆಯನ್ನು ನೀಡಲು ನನಗೆ ಯಾವುದೇ ತಕರಾರು ಇರುವುದಿಲ್ಲ.

**8 ನೇ ಪ್ರತಿವಾದಿ ಪರ ವಕೀಲರು ಸಮಯಾವಕಾಶ ಕೇಳಿದ್ದು ಪಾಟೀ ಸವಾಲು ಮುಂದೂಡಲಾಗಿದೆ.**

(ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸರಿ.ಇದೆ.

ಸಹಿ/-
(ಎನ್ ಬಿ ಜಯಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು,
ಕೊಡಗು, ಮಡಿಕೇರಿ.